# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1040 |
| ಸದಸ್ಯರ ಹೆಸರು | ಶ್ರೀ ಕುಶಾಲಪ್ಪ ಎಂ. ಪಿ. |
| ಉತ್ತರಿಸುವ ದಿನಾಂಕ | 18-12-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ತಲಕಾವೇರಿಯಲ್ಲಿ ಈ ಹಿಂದೆ ಅಗಸ್ತ್ಯೇಶ್ವರ ಲಿಂಗವನ್ನು ಪೂಜಿಸಲಾಗುತ್ತಿತ್ತೇ; ನಂತರದಲ್ಲಿ ಈ ಅಗಸ್ತ್ಯೇಶ್ವರ ಲಿಂಗವನ್ನು ವಿಸರ್ಜನೆ ಮಾಡುವ ಪರಿಸ್ಥಿತಿ ಉಂಟಾಗಿದ್ದು, ಯಾವ ಕಾರಣಕ್ಕಾಗಿ: | ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ತಲಕಾವೇರಿಯ ಶ್ರೀ ತಲಕಾವೇರಿ ದೇವಾಲಯದಲ್ಲಿ ಅಗಸ್ತ್ಯ ಮಹರ್ಷಿ ಮುನಿಗಳು ಪ್ರತಿಷ್ಠಾಪಿಸಿರುವ ಲಿಂಗವಾಗಿರುವುದೆಂದು, ಸದರಿ ಶಿವಲಿಂಗವನ್ನು "ಅಗಸ್ತ್ಯೇಶ್ವರ ಲಿಂಗ" ಎಂದು ಕರೆಯಲ್ಪಟ್ಟು ಈ ಹಿಂದಿನಿಂದಲೂ ಪೂಜಿಸಿಕೊಂಡು ಬರಲಾಗುತ್ತಿತ್ತು.<br><br>ನಂತರ ದಿನಾಂಕ:16.01.2002 ರಂದು ದೇವಾಲಯದ ವತಿಯಿಂದ ನಡೆಸಿದ ಅಷ್ಟಮಂಗಲ ಪ್ರಶ್ನೆ ಸಂದರ್ಭ ಜ್ಯೋತಿಷಿಗಳು ಹೇಳಿದಂತೆ ಶ್ರೀ ಅಗಸ್ತ್ಯೇಶ್ವರನ ಬಿಂಬವು ಅತ್ಯಂತ ಜೀರ್ಣವಾಗಿದ್ದು, ಇದು ಅಷ್ಟಬಂಧವು ಬಿಟ್ಟು ಹೋಗಿ ಭಿನ್ನವಾಗಿದ್ದ ಕಾರಣ, ಹೊಸ ಬಿಂಬವನ್ನು ಪ್ರತಿಷ್ಠಾಪಿಸುವುದು ಸೂಕ್ತವೆಂದು ಹಾಗೂ ಹೊಸ ಬಿಂಬ ಸ್ಥಾಪನೆಯ ಸಂದರ್ಭದಲ್ಲಿ ಜೀರ್ಣವಾದ ಶ್ರೀ ಅಗಸ್ತ್ಯೇಶ್ವರ ಹಳೆ ಬಿಂಬವನ್ನು(ಶಿವಲಿಂಗವನ್ನು) ನಿಸ್ತೇಜಗೊಳಿಸಿ, ಅದರಡಿಯಲ್ಲಿ ಭೂಗತ ಮಾಡಬೇಕೆಂದು ತಿಳಿಸಿರುತ್ತಾರೆ. ಅದರಂತೆ ದೇವಾಲಯದ ಜೀರ್ಣೋದ್ಧಾರ/ಅಭಿವೃದ್ಧಿಯ ಸಂದರ್ಭದಲ್ಲಿ ಅಗಸ್ತ್ಯೇಶ್ವರ ಲಿಂಗವನ್ನು ಭೂಗತಗೊಳಿಸಿ ಅದರ ಮೇಲೆ ಹೊಸ ಲಿಂಗವನ್ನು ಪ್ರತಿಷ್ಠಾಪಿಸಲಾಗಿರುತ್ತದೆ.<br><br>ನಂತರ ದಿನಾಂಕ:21.05.2018 ರಂದು ನಡೆದ ಅಷ್ಟಮಂಗಲ ಪ್ರಶ್ನೆಯಲ್ಲಿ ಈಗಾಗಲೇ ಭೂಗತಗೊಳಿಸಿರುವ ಹಳೆ ಶ್ರೀ ಅಗಸ್ತ್ಯೇಶ್ವರ ಬಿಂಬವನ್ನು ನಿಸ್ತೇಜಗೊಳಿಸುವಂತೆ ಹಾಗೂ ಸದರಿ ವಿಗ್ರಹವನ್ನು "ಪೂಂಪಹಾರ್" ಎಂಬ ಕಾವೇರಿ ನದಿ ಸಮುದ್ರ ಸೇರುವ ಸ್ಥಳದಲ್ಲಿ ವಿಸರ್ಜನೆ ಮಾಡಬೇಕೆಂದೂ ಹಾಗೂ ಅಡಿ ಭಾಗದಲ್ಲಿ ಇಟ್ಟಿರುವ ಹಳೇ ಬಿಂಬವು(ಶಿವಲಿಂಗ) ತಂತ್ರಿಗಳಿಗೆ ವಿಘ್ನ ಉಂಟಾಗಿದೆ ಎಂದು ತಿಳಿಸಿರುವ ಹಿನ್ನಲೆಯಲ್ಲಿ ಸದರಿ ಶಿವಲಿಂಗವನ್ನು ಹೊರತೆಗೆದು, ಬಂಗಾಳ ಕೊಲ್ಲಿ ಸಮುದ್ರದಲ್ಲಿ ವಿಸರ್ಜಿಸುವ ಸಲುವಾಗಿ ದೇವಾಲಯದಲ್ಲಿಯೇ ಸುರಕ್ಷಿತವಾಗಿ ಇರಿಸಲಾಗಿದೆ. |
| ಆ) | ವಿಸರ್ಜನೆ ಮಾಡಲು ಇಲಾಖೆಯು ಯಾವ ಕ್ರಮಗಳನ್ನು ಕೈಗೊಂಡಿದೆ: ಅಗಸ್ತ್ಯೇಶ್ವರ ಲಿಂಗವನ್ನು ವಿಸರ್ಜನೆ ಮಾಡಿರುವ ಬಗ್ಗೆ ಸ್ಥಳೀಯರ ವಿರೋಧವಿದೆಯೇ; ಈ ನಿಟ್ಟಿನಲ್ಲಿ ಮರು ಪ್ರತಿಷ್ಠಾಪನೆ ಮಾಡಬೇಕೆಂಬ ಬೇಡಿಕೆ ಇದೆಯೇ; | ದಿನಾಂಕ: 21.05.2018 ರಂದು ನಡೆದ ಅಷ್ಟಮಂಗಲ ಪ್ರಶ್ನೆಯಲ್ಲಿ ಈಗಾಗಲೇ ಭೂಗತಗೊಳಿಸಿರುವ ಹಳೆ ಶ್ರೀ ಅಗಸ್ತ್ಯೇಶ್ವರ ಬಿಂಬವನ್ನು ನಿಸ್ತೇಜಗೊಳಿಸುವಂತೆ ಹಾಗೂ ಸದರಿ ವಿಗ್ರಹವನ್ನು "ಪೂಂಪಹಾರ್" ಎಂಬ ಕಾವೇರಿ ನದಿ ಸಮುದ್ರ ಸೇರುವ ಸ್ಥಳದಲ್ಲಿ ವಿಸರ್ಜನೆ ಮಾಡಬೇಕೆಂದೂ ಹಾಗೂ 2002ರ ಅಷ್ಟಮಂಗಲ ಪ್ರಶ್ನೆಯಂತೆ ಹೊಸ ಶಿವಲಿಂಗದ ಅಡಿ ಭಾಗದಲ್ಲಿ ಇಟ್ಟಿರುವ ಹಳೇ ಬಿಂಬವು (ಶಿವಲಿಂಗ) ತಂತ್ರಿಗಳಿಗೆ ವಿಘ್ನ ಉಂಟಾಗಿದೆ ಎಂದು ತಿಳಿಸಿರುವ ಹಿನ್ನಲೆಯಲ್ಲಿ, ಈ ಹಿಂದೆ ಶಿವಲಿಂಗವನ್ನು ಭೂಗತಗೊಳಿಸಲಾಗಿದ್ದ ಶಿವಲಿಂಗವನ್ನು ಬಂಗಾಳ ಕೊಲ್ಲಿ ಸಮುದ್ರದಲ್ಲಿ ವಿಸರ್ಜಿಸುವ ಸಲುವಾಗಿ ಹೊರತೆಗೆಯಲಾಗಿರುತ್ತದೆ. ಆದರೇ ಸ್ಥಳೀಯರ ಪರ ಮತ್ತು ವಿರೋಧದಿಂದಾಗಿ ಮತ್ತು ಶ್ರೀ |

| | ಪ್ರಶ್ನೆ | ಉತ್ತರ |
|---|---|---|
| | | ಲೋಹಿತ್‌ಅರಸ್ ಇವರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 15763/2019ಅನ್ನು ದಾಖಲಿಸಿ, ವಿಘ್ನಗೊಂಡ ಶ್ರೀ ಅಗಸ್ತ್ಯೇಶ್ವರ ಲಿಂಗವನ್ನು ಬಂಗಾಳ ಕೊಲ್ಲಿ ಸಮುದ್ರದಲ್ಲಿ ಮುಳುಗಿಸದಂತೆ ಹಾಗೂ ಸದರಿ ಶಿವಲಿಂಗವನ್ನು ಅಲ್ಲಿಯೇ ಪುನರ್ ಸ್ಥಾಪಿಸುವಂತೆ ಪ್ರತಿವಾದಿಯವರಿಗೆ ನಿರ್ದೇಶನ ನೀಡುವಂತೆ ರಿಟ್ ಅರ್ಜಿದಾರರು ರಿಟ್ ಅರ್ಜಿಯಲ್ಲಿ ಕೋರಿರುತ್ತಾರೆ. |
| ಇ) | ಇವೆರಡರ ಮಧ್ಯೆ ಕೊಡಗು ಜಿಲ್ಲೆಯಲ್ಲಿ ಆಗುತ್ತಿರುವ ಅಕಾಲಿಕ ಪ್ರಕೃತಿ ವಿಕೋಪಗಳು ಈ ಅಗಸ್ತ್ಯೇಶ್ವರ ಲಿಂಗದ ಕಡೆಗಣಿಯೇ ಇದಕ್ಕೆ ಕಾರಣವೆಂದು ಜನರಲ್ಲಿ ನಂಬಿಕೆ ವ್ಯಕ್ತವಾಗುತ್ತಿದ್ದು, ಇದರ ಪ್ರತಿಷ್ಠಾಪನೆಗೆ ವಿಸರ್ಜನೆಗೆ ಇಲಾಖೆಯು ನ್ಯಾಯಾಲಯದ ತಡೆಯಾಜ್ಞೆಗೆ ಅನುಗುಣವಾಗಿ ತೆಗೆದುಕೊಂಡಿರುವ ಕ್ರಮಗಳೇನು; | ಶ್ರೀ ಲೋಹಿತ್ ಇವರು ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 15763/2019ರ ರಿಟ್ ಅರ್ಜಿಯ ಮೇಲೆ, ಮಾನ್ಯ ನ್ಯಾಯಾಲಯವು ಪ್ರಕರಣದ ವಿಚಾರಣೆಯನ್ನು ದಿನಾಂಕ:10.04.2019 ರಂದು ಕೈಗೆತ್ತಿಕೊಂಡು, ಈ ಕೆಳಕಂಡಂತೆ ಮಧ್ಯಂತರ ಆದೇಶವನ್ನು ನೀಡಿದೆ ;-<br><br>**"Pending issue of Rule nisi in the aforesaid Writ Petition it is hereby ordered by this Court on Wednesday THE 10th DAY OF April 2019"**<br><br>**Note:- As on interim relief, it is prayed to pass necessary orders and issue directions to respondents 1 to 5 and 8 and 9 not to remove the Agashtyeshwara Linga from Agashtyeshwara temple at Talacauvery, Madikeri Taluk, Coorg District and not to immense the same in the Sea of Bengal or in any other place and not to destroy the Agashtyeshwara Linga in any manner.**<br><br>ಮಾನ್ಯ ನ್ಯಾಯಾಲಯವು ನೀಡಿರುವ ಮಧ್ಯಂತರ ಆದೇಶದಿಂದಾಗಿ ಪ್ರಸ್ತುತ ಯಾವುದೇ ಕ್ರಮವನ್ನು ವಹಿಸಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಹಳೇ ಶಿವಲಿಂಗವನ್ನು ಪುನರ್ ಸ್ಥಾಪಿಸುವ ವಿಚಾರದಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶದಂತೆ ಕ್ರಮವಹಿಸುವ ಸಲುವಾಗಿ ಶ್ರೀ ಅಗಸ್ತ್ಯೇಶ್ವರ ಲಿಂಗವನ್ನು "ಪೂಂಪಹಾರ್" ಎಂಬ ಕಾವೇರಿ ನದಿ ಸಮುದ್ರ ಸೇರುವ ಸ್ಥಳದಲ್ಲಿ ವಿಸರ್ಜಿಸದೇ ದೇವಾಲಯದಲ್ಲಿಯೇ ಸುರಕ್ಷಿತವಾಗಿ ಇರಿಸಲಾಗಿದೆ. |
| ಈ) | ಇಲಾಖೆಯು ಸ್ಥಳೀಯ ಮಟ್ಟದಲ್ಲಿ ಚರ್ಚಿಸಿ ಇದಕ್ಕೊಂದು ಮುಕ್ತಿ ನೀಡುವ ನಿಟ್ಟಿನಲ್ಲಿ ತೆಗೆದುಕೊಳ್ಳಬಹುದಾದ ಕ್ರಮಗಳೇನು; ಅಥವಾ ಇದಕೊಂದು ಸಮಿತಿ ರಚಿಸಿ ಅಗಸ್ತ್ಯೇಶ್ವರ ಲಿಂಗಕ್ಕೆ ಮುಕ್ತಿ ನೀಡುವ ಕಾರ್ಯಕ್ಕೆ ಇಲಾಖೆಯ ಮುಂದಿರುವ ಕ್ರಮಗಳೇನು; | ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ನೀಡುವ ಅಂತಿಮ ಆದೇಶದ ಮೇರೆಗೆ ಮುಂದಿನ ಕ್ರಮವಹಿಸಬೇಕಾಗಿದ್ದು, ಅಂತಿಮ ಆದೇಶ ನಿರೀಕ್ಷಿಸಲಾಗುತ್ತಿದೆ. |

ಸಂಖ್ಯೆ: **ಕಂಇ 177 ಮುಸಪ್ರ 2024**

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು